**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು. ದಿಃ 20.06.2023.**

**<u>ಪಾಟೀಸವಾಲುಃ 1 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ ವೈ ಜಿ ಪಿ ವಕೀಲರಿಂದಃ</u>**

2. ನಾವು ಒಟ್ಟು 3 ಜನ ಅಣ್ಣ ತಮ್ಮಂದಿರು. ನನಗೆ ನಮ್ಮ ಊರಿನದಲ್ಲಿ ವಾಸದ ಮನೆ ಮತ್ತು ಆಸ್ತಿಗಳು ಇರುತ್ತವೆ ಎಂದರೆ ನನ್ನ ಅಜ್ಜ ಮಾಡಿದ ಆಸ್ತಿಗಳು ಇರುತ್ತವೆ. 1 ನೇ ಪ್ರತಿವಾದಿ ಅಕ್ಕನ ಮಗಳನ್ನು ನಾನು ಮದುವೆಯಾಗಿರುತ್ತೇನೆ. ನಾನು ನನ್ನ ಮದುವೆಗೆ ಹೆಣ್ಣು ನೋಡುವ ಕಾಲಕ್ಕೆ ಹುಡುಗಿಯ ಅಜ್ಜಿ ಕೆರಿಯಮ್ಮ, ನನ್ನ ಅಣ್ಣ ಮತ್ತು ನಾನು ಇದ್ದೆವು. ನನ್ನ ವಾಸದ ಮನೆಯ ಸಂಖ್ಯೆ 162. ದಾವಾ ಸ್ವತ್ತು ನನ್ನ ಅತ್ತೆಯಾದ ರಾದಮ್ಮ ರವರ ಹೆಸರಿಗೆ ಇದ್ದು ಅವರು ಮೃತಪಟ್ಟ ನಂತರ ನನ್ನ ಹೆಂಡತಿ ಸರೋಜಮ್ಮ ರವರ ಹೆಸರಿಗೆ ಆಗಿರುತ್ತದೆ.

3. ದಾವಾ ಸ್ವತ್ತು 40 ಇಂಟು 60 ವಿಸ್ತೀರ್ಣ ಇರಬಹುದು. ದಾವಾ ಸ್ವತ್ತು ಪೂರ್ವದಿಂದ ಪಶ್ಚಿಮಕ್ಕೆ 105 ಅಡಿ ಅಗಲ, ಉತ್ತರದಿಂದ ದಕ್ಷಿಣಕ್ಕೆ 420 ಅಡಿ ಅಗಲ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 60 ಇಂಟು 60 ವಿಸ್ತೀರ್ಣ ಅನ್ನು ಹೊರತುಪಡಿಸಿ ಉಳಿದ ವಿಸ್ತೀರ್ಣದ ಜಾಗವು ಗ್ರಾಮಸ್ಥರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸುಳ್ಳು. ಸದರಿ 105 ಇಂಟು 420 ಅಡಿ ಅಳತೆಯ ಜಾಗದಲ್ಲಿ ಗ್ರಾಮಸ್ಥರು ದೀಪಾವಳಿ ಹಬ್ಬದಲ್ಲಿ ಕುರಿ ಕಡಿದು ಹಸೆ ಮಾಡಿದಾಗ ನಾನು ಗ್ರಾಮಸ್ಥರ ವಿರುದ್ದ ದೂರು ನೀಡಿರುತ್ತೇನೆ ಎಂದರೆ ಗ್ರಾಮಸ್ಥರು ಸದರಿ ಸ್ಥಳದಲ್ಲಿ ಕುರಿ ಕಡಿದು ಹಸೆ ಮಾಡಲು ಬಂದಿರುತ್ತಾರೆ. ಗ್ರಾಮಸ್ಥರು ಸ್ವಾಧೀನ ಹೊಂದಿದ ಜಾಗವನ್ನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನಾನು ಹಾಗೂ ವಾದಿ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸುಳ್ಳು. ದಾವಾ ಸ್ವತ್ತಿಗೆ ಫಾರಂ ನಂ.9 ಆಗಿರುವುದಿಲ್ಲ ಎಂದೆರೆ ಸುಳ್ಳು.

**ಮರುವಿಚಾರಣೆಃ ಇಲ್ಲಂ**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿ ಸಲಾಯ್ತು)ಂ**

**ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆಂ**

**ಸಿವಿಲ್ ನ್ಯಾಂ ಮತ್ತು ಜೆ ಎಂ ಎಫ್ ಸಿಃ ಸೊರಬ**